# ಕರ್ನಾಟಕ ವಿಧಾನ ಪರಿಷತ್

1. ಸದಸ್ಯರ ಹೆಸರು : ಶ್ರೀ ಐವನ್ 'ಡಿ'ಸೋಜಾ
2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2032
3. ಉತ್ತರಿಸಬೇಕಾದ ದಿನಾಂಕ : 27-03-2020

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಒಟ್ಟು ಎಷ್ಟು ಕಿಂಡಿ ಅಣೆಕಟ್ಟುಗಳನ್ನು ನರೇಗಾ ಯೋಜನೆ ಅಡಿಯಲ್ಲಿ ಕಟ್ಟಲಾಗಿದೆ; ಒಂದು ಅಣೆಕಟ್ಟಿಗೆ ತಗಲುವ ವೆಚ್ಚ ಎಷ್ಟು; (ಸಂಪೂರ್ಣ ವಿವರ ನೀಡುವುದು) | ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 456 ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು 70 ಕಿಂಡಿ ಅಣೆಕಟ್ಟುಗಳನ್ನು ಕಟ್ಟಲಾಗಿದೆ.<br>ಒಂದು ಕಿಂಡಿ ಅಣೆಕಟ್ಟು ನಿರ್ಮಾಣಕ್ಕಾಗಿ (ಉದ್ದ 7 ಮೀ.) ತಗಲುವ ಅಂದಾಜು ವೆಚ್ಚ ರೂ. 5.00 ಲಕ್ಷ.<br>ತಾಲ್ಲೂಕುವಾರು ವಿವರಗಳನ್ನು ***ಅನುಬಂಧ-1*** ರಲ್ಲಿ ನೀಡಿದೆ. |
| ಆ) | ನರೇಗಾ ಯೋಜನೆ ಅನ್ವಯ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಎಷ್ಟು ನೀರಾವರಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ; (ವಿವರ ನೀಡುವುದು) | ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 456 ಕಿಂಡಿ ಅಣೆಕಟ್ಟುಗಳು, 4767 ತೆರೆದ ಬಾವಿಗಳು ಮತ್ತು 769 ಕೊಳವೆಬಾವಿ ಮರು ಪೂರಣ ಘಟಕಗಳಂತಹ ನೀರಾವರಿ ಕಾಮಗಾರಿಗಳು/ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.<br>ಈ ಯೋಜನೆಯಡಿ ಉಡುಪಿ ಜಿಲ್ಲೆಯಲ್ಲಿ 9 ಕಿಂಡಿ ಅಣೆಕಟ್ಟುಗಳು, 5296 ತೆರೆದ ಬಾವಿಗಳು, 95 ಕೊಳವೆಬಾವಿ ಮರು ಪೂರಣ ಘಟಕಗಳು, 241 ಕೆರೆ ಅಭಿವೃದ್ಧಿ/ಹೂಳೆತ್ತುವ, 539 ತೋಡು ಹೂಳೆತ್ತುವ ಮತ್ತು 55 ಇತರೆ ನೀರಾವರಿ ಕಾಮಗಾರಿಗಳು/ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.<br>ತಾಲ್ಲೂಕುವಾರು ವಿವರಗಳನ್ನು ***ಅನುಬಂಧ-2*** ರಲ್ಲಿ ನೀಡಿದೆ. |
| ಇ) | ನೀರಾವರಿ ಯೋಜನೆಗಳನ್ನು ನರೇಗಾದಲ್ಲಿ ಕೈಗೊಂಡಿರುವ ನೀರಿನ ಮಟ್ಟವನ್ನು ಹೆಚ್ಚಿಸಲು ಸಾಧ್ಯವಾಗಿದೆಯೇ; ಈ ಬಗ್ಗೆ ಸರ್ಕಾರದಿಂದ ಮಾಹಿತಿ ಸಂಗ್ರಹಿಸಲಾಗಿದೆಯೇ; ಇದ್ದಲ್ಲಿ, ವಿವರ ನೀಡುವುದು? | ಹೌದು. ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಮೇಲೆ ತಿಳಿಸಿರುವ ಕಾಮಗಾರಿಗಳನ್ನು ಕೈಗೊಂಡಿರುವುದರಿಂದ ಅಂತರ್ಜಲ ಮಟ್ಟವನ್ನು ಹೆಚ್ಚಿನ ಅವಧಿಯವರೆಗೆ ಕಾಯ್ದುಕೊಳ್ಳಲು ಸಹಕಾರಿಯಾಗಿರುತ್ತದೆ.<br>ಹೌದು. ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನಲ್ಲಿ ಕೇಂದ್ರ ಅಂತರ್ಜಲ ಮಂಡಳಿಯವರು (Central Ground Water Board) ನೀಡಿರುವ ವರದಿಯಂತೆ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಅನುಷ್ಠಾನಿಸಲಾದ ಬಹು ಕಮಾನು ತಡೆ ಅಣೆಕಟ್ಟುಗಳ ಸುತ್ತಲೂ ಅಂತರ್ಜಲ ಮಟ್ಟವು ಹೆಚ್ಚು ಆಗಿರುವುದು ಕಂಡುಬಂದಿರುತ್ತದೆ. ರೈತರು ಸಹ ಈ ಕಾಮಗಾರಿಗಳಿಂದ ಪ್ರಯೋಜನವಾಗಿದೆ ಎಂದು ತಿಳಿಸಿರುತ್ತಾರೆ. |

ಸಂಖ್ಯೆ: ಗ್ರಾಅಪ 38(144) ಉಖಾಯೋ 2019

**(ಕೆ.ಎಸ್.ಈಶ್ವರಪ್ಪ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

## ಅನುಬಂಧ-1

## ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2032

## ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಕೈಗೊಂಡಿರುವ ಕಿಂಡಿ ಅಣೆಕಟ್ಟುಗಳ ವಿವರಗಳು

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ | ಒಟ್ಟು ಕಾಮಗಾರಿಗಳ ಸಂಖ್ಯೆ | ಉತ್ಪತ್ತಿಯಾದ ಮಾನವ ದಿನಗಳ ಸಂಖ್ಯೆ | ಭರಿಸಿದ ವೆಚ್ಚ (ರೂ. ಲಕ್ಷಗಳಲ್ಲಿ) |
|---|---|---|---|---|---|---|
| 1 | ದಕ್ಷಿಣ ಕನ್ನಡ | ಬಂಟ್ವಾಳ | 99 | 114 | 62666 | 323.10 |
| 2 | ದಕ್ಷಿಣ ಕನ್ನಡ | ಬೆಳ್ತಂಗಡಿ | 85 | 106 | 31587 | 280.06 |
| 3 | ದಕ್ಷಿಣ ಕನ್ನಡ | ಮಂಗಳೂರು | 43 | 45 | 18470 | 147.63 |
| 4 | ದಕ್ಷಿಣ ಕನ್ನಡ | ಪುತ್ತೂರು | 78 | 95 | 32745 | 295.40 |
| 5 | ದಕ್ಷಿಣ ಕನ್ನಡ | ಸುಳ್ಯ | 88 | 96 | 26270 | 341.55 |
| ಒಟ್ಟು | | | **393** | **456** | **171738** | **1387.74** |
| 6 | ಉತ್ತರ ಕನ್ನಡ | ಅಂಕೋಲ | 2 | 2 | 530 | 4.09 |
| 7 | ಉತ್ತರ ಕನ್ನಡ | ಭಟ್ಕಳ | 0 | 1 | 0 | 0.00 |
| 8 | ಉತ್ತರ ಕನ್ನಡ | ಹಳಿಯಾಳ | 0 | 0 | 0 | 0.00 |
| 9 | ಉತ್ತರ ಕನ್ನಡ | ಹೊನ್ನಾವರ | 0 | 9 | 0 | 0.00 |
| 10 | ಉತ್ತರ ಕನ್ನಡ | ಕಾರವಾರ | 2 | 2 | 847 | 2.53 |
| 11 | ಉತ್ತರ ಕನ್ನಡ | ಕುಮುಟ | 8 | 9 | 736 | 12.04 |
| 12 | ಉತ್ತರ ಕನ್ನಡ | ಮುಂಡಗೋಡ | 3 | 3 | 1385 | 7.99 |
| 13 | ಉತ್ತರ ಕನ್ನಡ | ಸಿದ್ದಾಪುರ | 1 | 2 | 451 | 3.90 |
| 14 | ಉತ್ತರ ಕನ್ನಡ | ಶಿರಸಿ | 0 | 5 | 0 | 0.00 |
| 15 | ಉತ್ತರ ಕನ್ನಡ | ಜೋಯಿಡಾ | 27 | 32 | 9037 | 39.11 |
| 16 | ಉತ್ತರ ಕನ್ನಡ | ಯಲ್ಲಾಪುರ | 1 | 5 | 92 | 3.00 |
| ಒಟ್ಟು | | | **44** | **70** | **13078** | **72.66** |

ಅನುಬಂಧ-2

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2032

ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಕೈಗೊಂಡಿರುವ ನೀರಾವರಿ ಕಾರ್ಯಕ್ರಮಗಳ ವಿವರಗಳು

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ಕಿಂಡಿ ಅಣೆಕಟ್ಟು ಕಾಮಗಾರಿಗಳ ಸಂಖ್ಯೆ | ತೆರೆದ ಬಾವಿ ಕಾಮಗಾರಿಗಳ ಸಂಖ್ಯೆ | ಕೊಳವೆ ಬಾವಿ ಮರು ಪೂರಣ ಘಟಕ ಕಾಮಗಾರಿಗಳ ಸಂಖ್ಯೆ | ಕೆರೆ ಅಭಿವೃದ್ಧಿ/ ಹೂಳೆತ್ತುವ ಕಾಮಗಾರಿಗಳ ಸಂಖ್ಯೆ | ತೋಡು ಹೂಳೆತ್ತುವ ಕಾಮಗಾರಿಗಳ ಸಂಖ್ಯೆ | ಇತರೆ ನೀರಾವರಿ ಕಾಮಗಾರಿಗಳ ಸಂಖ್ಯೆ |
|---|---|---|---|---|---|---|---|---|
| 1 | ದಕ್ಷಿಣ ಕನ್ನಡ | ಬಂಟ್ವಾಳ | 114 | 807 | 183 | 0 | 0 | 0 |
| 2 | ದಕ್ಷಿಣ ಕನ್ನಡ | ಬೆಳ್ತಂಗಡಿ | 106 | 1059 | 93 | 0 | 0 | 0 |
| 3 | ದಕ್ಷಿಣ ಕನ್ನಡ | ಮಂಗಳೂರು | 45 | 1303 | 99 | 0 | 0 | 0 |
| 4 | ದಕ್ಷಿಣ ಕನ್ನಡ | ಪುತ್ತೂರು | 95 | 771 | 247 | 0 | 0 | 0 |
| 5 | ದಕ್ಷಿಣ ಕನ್ನಡ | ಸುಳ್ಯ | 96 | 827 | 147 | 0 | 0 | 0 |
| **ಒಟ್ಟು** | | | **456** | **4767** | **769** | **0** | **0** | **0** |
| 6 | ಉಡುಪಿ | ಉಡುಪಿ | 0 | 1841 | 15 | 23 | 125 | 0 |
| 7 | ಉತ್ತರ ಕನ್ನಡ | ಕುಂದಾಪುರ | 4 | 2793 | 15 | 200 | 414 | 0 |
| 8 | ಉತ್ತರ ಕನ್ನಡ | ಕಾರ್ಕಳ | 5 | 662 | 65 | 18 | 0 | 55 |
| **ಒಟ್ಟು** | | | **9** | **5296** | **95** | **241** | **539** | **55** |